# COUNCIL SECTION STANDARD PROCCEDURE

1. ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 59 ಎಂಎಲ್ಆರ್ 2009, ದಿನಾಂಕ:23–09–2009 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಪ್ರದೇಶಗಳನ್ನು 198 ವಾರ್ಡ್‌ಗಳನ್ನಾಗಿ ವಿಂಗಡಿಸಿದ್ದು, ಈ ಸಂಬಂಧ ಸದರಿ ವಾರ್ಡ್‌ಗಳಿಗೆ ದಿನಾಂಕ:28–03–2010 ರಂದು ಸಾರ್ವತ್ರಿಕ ಚುನಾವಣೆ ನಡೆದಿದ್ದು, ಈ ಮೇರೆಗೆ ಸದರಿ ಚುನಾವಣೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 66 ಎಂಎಲ್ಆರ್ 2010 ದಿನಾಂಕ:16–04–2010 ರಂದು ಹೊರಡಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ದಿನಾಂಕ:23–04–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಥಮ ಸಭೆಯು ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ರವರ ಅಧ್ಯಕ್ಷತೆಯಲ್ಲಿ ನಡೆದಿದ್ದು ಈ ಸಭೆಯಲ್ಲಿ ಎಲ್ಲಾ ನಗರ ಪಾಲಿಕೆಯ ಸದಸ್ಯರುಗಳು ಪ್ರಮಾಣ ವಚನ ಸ್ವೀಕರಿಸಿರುತ್ತಾರೆ. 2. ಸರ್ಕಾರವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 ರ ಸೆಕ್ಷನ್ 11 (1–ಎ) ಗೆ ತಿದ್ದುಪಡಿ ತಂದು ಜಾರಿಯಲ್ಲಿದ್ದ ಎಂಟು ಸ್ಥಾಯಿ ಸಮಿತಿಗಳ ಸಂಖ್ಯೆಯನ್ನು ಹನ್ನೆರಡಕ್ಕೆ ಹಾಗೂ ಏಳು ಸದಸ್ಯರುಗಳ ಸಂಖ್ಯೆಯನ್ನು ಹನ್ನೊಂದು ಸದಸ್ಯರುಗಳಿಗೆ ಹೆಚ್ಚಿಸಲಾಗಿದ್ದು, ಸದರಿ ಸ್ಥಾಯಿ ಸಮಿತಿಗಳ ವಿವರಗಳು ಕೆಳಕಂಡಂತಿವೆ;

1. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
2. ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
3. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ
4. ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
5. ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
6. ಲೆಕ್ಕಪತ್ರ ಸ್ಥಾಯಿ ಸಮಿತಿ
7. ಶಿಕ್ಷಣ ಸ್ಥಾಯಿ ಸಮಿತಿ
8. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
9. ಅಪೀಲು ಸ್ಥಾಯಿ ಸಮಿತಿ
10. ತೋಟಗಾರಿಕೆ ಸ್ಥಾಯಿ ಸಮಿತಿ
11. ಮಾರುಕಟ್ಟೆ ಸ್ಥಾಯಿ ಸಮಿತಿ
12. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

3. ಸರ್ಕಾರದ ಮೀಸಲಾತಿಯನುಸಾರ ಪೂಜ್ಯ ಮಹಾಪೌರರು, ಉಪ ಮಹಾಪೌರರು ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ಇದರೊಂದಿಗೆ 12 ಸ್ಥಾಯಿ ಸಮಿತಿಗಳ ಹನ್ನೊಂದು ಸದಸ್ಯರ ಸ್ಥಾನಕ್ಕೆ ಪ್ರತಿ ವರ್ಷವೂ ಪ್ರಾದೇಶಿಕ ಆಯುಕ್ತರವರ ಅಧ್ಯಕ್ಷತೆಯಲ್ಲಿ ಚುನಾವಣೆ ನಡೆಯಲಿದ್ದು, ನಂತರದಲ್ಲಿ ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿಗಳ ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ಮುಖೇನ ನಡೆಸಲಾಗುತ್ತದೆ. ಇವರುಗಳ ಅಧಿಕಾರಾವಧಿಯು 1 ವರ್ಷವಾಗಿರುತ್ತದೆ.

..........2

4. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 12 ಸ್ಥಾಯಿ ಸಮಿತಿಗಳ ಅಧಿಕಾರ ಮತ್ತು ಕಾರ್ಯವ್ಯಾಪ್ತಿ ಕುರಿತಂತೆ ಸರ್ಕಾರದ ಸಂಖ್ಯೆ ಸಂವ್ಯಶಾಇ 26 ಶಾಸನ 2010, ದಿನಾಂಕ:30-07-2010 ರಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಮುಂದುವರೆದಂತೆ ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಬಿ12(3ಎ)/ಸಿಪಿಆರ್/44/10-11, ದಿನಾಂಕ:07-04-2011 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 12 ಸ್ಥಾಯಿ ಸಮಿತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 ರ ಯಾವ ಯಾವ ಸೆಕ್ಷನ್‌ಗಳ ಅಡಿಯಲ್ಲಿ ಪ್ರಸ್ತಾವನೆಗಳನ್ನು ಯಾವ ಯಾವ ಸ್ಥಾಯಿ ಸಮಿತಿಗಳಿಗೆ ಕಡತವನ್ನು ಮಂಡಿಸಬೇಕೆಂದು ನಿರ್ದೇಶನಗಳಿರುತ್ತವೆ.

5. ಸರ್ಕಾರದ ಅಧಿಸೂಚನೆ ಮತ್ತು ಆಯುಕ್ತರ ಕಛೇರಿ ಸುತ್ತೋಲೆಯ ಅನ್ವಯ ಇಲಾಖಾ ಮುಖ್ಯಸ್ಥರುಗಳು ಮಂಡಿಸುವ ಕಡತಗಳಿಗೆ ಸಂಬಂಧಿಸಿದಂತೆ, ಪ್ರಸ್ತಾವನೆಯ ಟಿಪ್ಪಣಿಗೆ ಮಾನ್ಯ ಆಯುಕ್ತರು, ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಮತ್ತು ಮಾನ್ಯ ಅಪರ ಆಯುಕ್ತರು (ಯೋಜನೆ) ರವರ ಸಹಿಯೊಂದಿಗೆ ಸಂಬಂಧಪಟ್ಟ ಸ್ಥಾಯಿ ಸಮಿತಿಗೆ ಕಡತವನ್ನು ಮಂಡಿಸಲಾಗುತ್ತದೆ.

6. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/636/ಎಂಎನ್‌ವೈ/2010, ದಿನಾಂಕ:02-04-2011 ರ ರೀತ್ಯಾ, ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ಮತ್ತು ಆರ್ಥಿಕ ಮಂಜೂರಾತಿ ಕುರಿತಂತೆ ಆಡಳಿತ ಅಧಿಕಾರ ಪ್ರತ್ಯಾಯೋಜನೆಯನ್ನು ನಿಗಧಿಪಡಿಸಿದ್ದು, ಅದರಂತೆ, ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿ ಸುತ್ತೋಲೆ ಸಂಖ್ಯೆ: ಪ್ರಆ/ಪಿಆರ್/118/11-12, ದಿನಾಂಕ:12-01-2012 ರಂತೆ ಆಡಳಿತ ಅಧಿಕಾರ ಪ್ರತ್ಯಾಯೋಜನೆ ಕುರಿತಂತೆ ಆದೇಶ ಹೊರಡಿಸಿ ಅದರಂತೆ ಸಂಬಂಧಪಟ್ಟ ಇಲಾಖೆಗಳು ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮುಂದೆ ಅನುಮೋದನೆಗೆ ಪ್ರಸ್ತಾವನೆಯನ್ನು ಮಂಡಿಸಲಾಗುತ್ತದೆ.

7. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 ರ ರೀತ್ಯಾ ತಿಂಗಳಿಗೆ ಕನಿಷ್ಟ 1 ಸಭೆಯನ್ನು ನಡೆಸಬೇಕಾಗಿದ್ದು, ಸಾಮಾನ್ಯವಾಗಿ ಮಾಹೆಯಾನ ಪೂಜ್ಯ ಮಹಾಪೌರರ ಆದೇಶದ ರೀತ್ಯಾ, 1 ವಿಷಯಗಳ ಸಭೆ ಮತ್ತು 1 ಸಾಮಾನ್ಯ ಸಭೆಯನ್ನು ನಡೆಸಲಾಗುತ್ತದೆ.

8. ಸದರಿ ಸಭೆಗಳಲ್ಲಿ ವಿಷಯ ಸಭೆಯಲ್ಲಿ ಸ್ಥಾಯಿ ಸಮಿತಿಗಳ ಅಧಿಕಾರ ವ್ಯಾಪ್ತಿ ಮೀರಿದ ಹಾಗೂ policy dicission ಗೆ ಸಂಬಂಧಿಸಿದ ಮಾನ್ಯ ಆಯುಕ್ತರು, ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಮತ್ತು ಮಾನ್ಯ ಅಪರ ಆಯುಕ್ತರು (ಯೋಜನೆ) ರವರು ಮಂಡಿಸಿದ ಪ್ರಸ್ತಾವನೆಗಳಿಗೆ ಸಂಬಂಧಿಸಿದ ಅಜೆಂಡಾ ತಯಾರಿಸಿ ಸಭೆ ನಡೆಯುವ 7 ದಿನಗಳ ಮುಂಚಿತವಾಗಿ ಎಲ್ಲಾ ನಗರಸಭಾ ಸದಸ್ಯರುಗಳಿಗೆ, ಲೋಕ ಸಭಾ ಸದಸ್ಯರುಗಳಿಗೆ, ವಿಧಾನ ಸಭಾ ಸದಸ್ಯರುಗಳಿಗೆ, ವಿಧಾನ ಪರಿಷತ್ ಸದಸ್ಯರುಗಳಿಗೆ, ನಾಮ ನಿರ್ದೇಶಿತ ಸದಸ್ಯರುಗಳಿಗೆ, ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಕಳುಹಿಸಲಾಗುತ್ತದೆ. ಉಳಿದಂತೆ, ಮಾಹೆಯಾನ ಸಾಮಾನ್ಯ ಸಭೆಯಲ್ಲಿ ಪ್ರಶ್ನೋತ್ತರ ವೇಳೆಗೆ ಅವಕಾಶವಿದ್ದು, ಸಭೆ ನಡೆಯುವ ದಿನಾಂಕದಂದು ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡುವ ಸದಸ್ಯರುಗಳು ಸಭೆ ನಡೆಯುವ 2 ಗಂಟೆ ಮುಂಚಿತವಾಗಿ ಬಂದು

..........3

"ಪ್ರಶ್ನೋತ್ತರ ವೇಳೆಯ ರಿಜಿಸ್ಟರ್" ನಲ್ಲಿ ತಮ್ಮ ಹೆಸರನ್ನು ದಾಖಲಿಸಿ ನಂತರದಲ್ಲಿ ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಲು ಅವಕಾಶವಿರುತ್ತದೆ.

9. ಮಾನ್ಯ ನಗರ ಪಾಲಿಕಾ ಸದಸ್ಯರುಗಳು ಪಾಲಿಕೆಯ ಆಡಳಿತಾತ್ಮಕ ಕೆಲಸ ಕಾರ್ಯಗಳ ಕುರಿತಂತೆ ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಕೋರಲು ಅವಕಾಶವಿದ್ದು, ಈ ರೀತಿ ಕೋರುವ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಇಲಾಖಾ ಮುಖ್ಯಸ್ಥರುಗಳಿಂದ ಮಾಹಿತಿಗಳನ್ನು ಪಡೆದು ಕ್ರೋಢೀಕರಿಸಿ ಮಾಹಿತಿ/ದಾಖಾಲಾತಿಗಳನ್ನು ಮಾನ್ಯ ಉಪ ಆಯುಕ್ತರು (ಆಡಳಿತ) ರವರ ಕಛೇರಿಯಿಂದ ಕಳುಹಿಸಿದ ನಂತರ ಪೂಜ್ಯ ಮಹಾಪೌರರ ಆದೇಶದ ಅನುಸಾರ ಚುಕ್ಕೆ ಗುರುತಿನ ಪ್ರಶ್ನೆಗಳ ಬಗ್ಗೆ ಚರ್ಚಿಸಲು ಸಭೆಯನ್ನು ಕರೆಯಲಾಗುತ್ತದೆ.

10. ಈ ಸಭೆಗಳ ಜೊತೆಗೆ ಹೆಚ್ಚುವರಿಯಾಗಿ ಆಯವ್ಯಯ ಮಂಡನೆ ಸಭೆ, ಆಯವ್ಯಯ ಚರ್ಚೆಯ ಸಭೆಗಳು, ಆಡಳಿತ ವರದಿ ಸಭೆಗಳು, ವಿಶೇಷ ಸಭೆಗಳು ಪೂಜ್ಯ ಮಹಾಪೌರರ ಆದೇಶದ ಅನುಸಾರ ನಡೆಯುತ್ತದೆ.

11. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ ಎಂಎಸ್‌ವೈ 2010, ದಿನಾಂಕ:21-06-2012 ರ ರೀತ್ಯಾ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಅಧಿನಿಯಮ, 1976 ರ ಕಲಂ 7 (1) (ಬಿ) ರನ್ವಯ 16 ಮಂದಿಯನ್ನು ನಾಮ ನಿರ್ದೇಶನ ಮಾಡಿದ್ದು, ಸದರಿಯವರು ಸಹ ಪಾಲಿಕೆಯ ಆಡಳಿತಾತ್ಮಕ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾತ್ರ ವಹಿಸುತ್ತಿದ್ದಾರೆ.

12. ಕೌನ್ಸಿಲ್ ಕಾರ್ಯಾಲಯದ ಅಧೀನದಲ್ಲಿ ಪೂಜ್ಯ ಮಹಾಪೌರರು, ಉಪ ಮಹಾಪೌರರು, ವಿವಿಧ ಪಕ್ಷದ ನಾಯಕರು ಹಾಗೂ 12 ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಛೇರಿಗಳ ದೂರವಾಣಿ ಬಿಲ್ಲು, ಇಂದನ ವೆಚ್ಚದ ಬಿಲ್ಲು, ಹೋಟೆಲ್ ಬಿಲ್ಲು ಹಾಗೂ ಇನ್ನಿತರ ಎಲ್ಲಾ ಕೆಲಸ ಕಾರ್ಯಗಳನ್ನು ಸಹ ಕೌನ್ಸಿಲ್ ಕಾರ್ಯಾಲಯದ ವತಿಯಿಂದಲೇ ನಿರ್ವಹಿಸಲಾಗುತ್ತಿದೆ.

ಕೌನ್ಸಿಲ್ ಕಾರ್ಯದರ್ಶಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು